**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.ಯವರ ನ್ಯಾಯಾಲಯ, ಪೊನ್ನಂಪೇಟೆ, ಕೊಡಗು ಜಿಲ್ಲೆ.**

**ಕ್ರಿಮಿನಲ್ ಮೊ.ಸಂ. 73/2016.**

**ಪ್ರಾ. ಸಾ. ಃ-6**

**ಚಾ. ಸಾ. ಃ-11**

**ಹೆಸರು** ಃ- ದೇವಯ್ಯ ಕೆ ಎಂ
**ತಂದೆಯ ಹೆಸರು** ಃ- ಲೇಟ್ ಕೆ ಮೇದಪ್ಪ
**ವಯಸ್ಸು** ಃ- 42 ವರ್ಷ
**ಉದ್ಯೋಗ** ಃ- ವಲಯ ಅರಣ್ಯಾಧಿಕಾರಿ
**ವಾಸಸ್ಥಳ** ಃ- ವಿರಾಜಪೇಟೆ

---

**ಪ್ರಮಾಣೀಕರಿಸಲಾದ ದಿನಾಂಕ :-20-11-2023.**

**ಮುಖ್ಯ ವಿಚಾರಣೆ :- ಮಾನ್ಯ ಸ. ಸ. ಅ. ರವರಿಂದ ಃ-**

2015 ರಲ್ಲಿ ವಿರಾಜಪೇಟೆ ನಗರ ಪೊಲೀಸ್ ಠಾಣೆಯವರು ಪ್ರಕರಣ ದಾಖಲಿಸಿದ್ದು, ಸದರಿ ಪ್ರಕರಣದಲ್ಲಿ ಬೀಟೆ ಮರಗಳನ್ನು ಅಮಾನತ್ತುಪಡಿಸಿರುತ್ತಾರೆ. ಸದರಿ ಮರಗಳ ಮೌಲ್ಯವನ್ನು ಧೃಡೀಕರಿಸುವಂತೆ ನನ್ನನ್ನು ಕೋರಿದ್ದು, ನಮ್ಮ ಉಪ ವಲಯ ಅರಣ್ಯಾಧಿಕಾರಿ ಸುರೇಶ್ ರವರು ಸದರಿ ಮರಗಳ ಮೌಲ್ಯವನ್ನು ತಿಳಿಸಿರುತ್ತಾರೆ. ನಾನು ಈ ಬಗ್ಗೆ ಧೃಡೀಕರಿಸಿ ವರದಿ ನೀಡಿರುತ್ತೇನೆ. ಸದರಿ ವರದಿಯನ್ನು ನಿಪಿ 12 ಎಂದು, ಸಾಕ್ಷಿ ಸಹಿಯನ್ನು ನಿಪಿ 12 ಎ ಎಂದು ಗುರುತಿಸಲಾಯಿತು.

**ಪಾಟೀ ಸವಾಲು** :- ಆರೋಪಿತರ ಪರ ವಕೀಲರಿಂದ

ಸದರಿ ಮರಗಳ ಮೌಲ್ಯವನ್ನು ಯಾವ ಆಧಾರದಲ್ಲಿ ಮಾಡಲಾಯಿತು ಎಂದು ದಾಖಲಾತಿ ಹಾಜರುಪಡಿಸಿಲ್ಲ ಎಂದರೆ ಸರ್ಕಾರದವರು ನಮಗೆ ಮರಗಳ ಮೌಲ್ಯದ ಬಗ್ಗೆ ಮಾಹಿತಿ ಇರುತ್ತದೆ. ಅದರಂತೆ ನಾವು ಬೆಲೆ ನಿರ್ಧಾರ ಮಾಡುತ್ತೇವೆ ಎನ್ನುತ್ತಾರೆ. ಸದರಿ ಮರಗಳ ಬೆಲೆ ಬಗ್ಗೆ ಸರ್ಕಾರದವರು ಮಾಡಿರುವ ದಾಖಲಾತಿಯನ್ನು ನಾನು ಹಾಜರುಪಡಿಸಿಲ್ಲ ಎಂದರೆ ಸರಿ. ನನಗೆ ಉಪ ವಲಯ ಅರಣ್ಯಾಧಿಕಾರಿ ಸುರೇಶ್ ರವರು ವರದಿ ಮಾಡಿದ್ದು, ಸದರಿ ವರದಿಯ ಆಧಾರದ ಮೇಲೆ ನಿಪಿ 12 ಅನ್ನು ನೀಡಿದ್ದೇನೆ ಎನ್ನುತ್ತಾರೆ. ನನಗೆ ಈ ಪ್ರಕರಣದ

ಬಗ್ಗೆ ಮಾಹಿತಿ ಇಲ್ಲದಿದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ- ಇಲ್ಲ.

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದಂತೆ ನೇರವಾಗಿ ಗಣಕಯಂತ್ರದಲ್ಲಿ ಬೆರಳಚ್ಚುಕರಿಸಿ ಅಚ್ಚುಪ್ರತಿಯನ್ನು ತೆಗೆಯಲಾಗಿರುತ್ತದೆ)**

**ಓದಿ ಹೇಳಿ ಕೇಳಿಸಿ ಸರಿ ಇದೆ ಎಂದು ಒಪ್ಪಿದೆ.**

sd/-

**(ಸಾಕ್ಷಿಯ ಸಹಿ)** **ಜೆ.ಎಂ.ಎಫ್.ಸಿ. ನ್ಯಾಯಾಧೀಶರು,**
**ಪೊನ್ನಂಪೇಟೆ.**